ಅಷ್ಟರಲ್ಲಿ ಮೂಸಬ್ಬನಿಗೆ ಮನೆಯೊಳಗಿನಿಂದ ಹೆಂಡತಿಯ ಕರೆ ಬಂತು. ಅವನ ಹೆಂಡತಿ ಕುಂಞಲಿಯಮ್ಮ ಬಾಗಿಲಲ್ಲಿ ನಿಂತು ಅವನನ್ನು ಕರೆಯುತ್ತಿದ್ದಳು. ಹೆಂಡತಿ ಕರೆದರೆ ಮೂಸಬ್ಬ ವಿಧೇಯನಾಗಿ ಹೋಗುವುದಿದೆ. ಅವನ ಮನೆ ನಡೆಸಿದ್ದೇ ಅವಳಲ್ಲವೇ? ಅವನ ಕಷ್ಟದಲ್ಲಿ ಸುಖದಲ್ಲಿ ಭಾಗಿಯಾದವಳು ಅವಳು. ಅವನ ಬಳಿ ಏನೂ ಇಲ್ಲದಿದ್ದ ಸಮಯದಲ್ಲಿ ಹಿಡಿ ಗಂಜಿಯನ್ನು ಹಂಚಿಕೊಂಡು ಸಂಸಾರ ಮಾಡಿದವಳು ಅವಳು. ಆ ತಿಳಿವಳಿಕೆಯಿಂದ ಮೂಸಬ್ಬ ಈ ಅಭ್ಯಾಸವನ್ನು ಇರಿಸಿಕೊಂಡಿದ್ದ. ಆದುದರಿಂದ ಕೊಡಲಿ ಸಮೇತ ಅವನು ಹೆಂಡತಿಯ ಬಳಿ ಸಾರಿದ. ಅವಳು ಅವನನ್ನು ಮನೆಯೊಳಗೆ ಸೆಳೆದುಕೊಂಡು ಬಾಗಿಲು ಅಡ್ಡಮಾಡಿದಳು.

'ನೀವು ಏನೂ ಮರಕ್ಕೆ ಕೊಡಲಿ ಏಟು ಹಾಕುವುದು ಬೇಡ. ಅದರಲ್ಲಿ ಅವರು ದೇವರು ವಾಸ ಮಾಡುತ್ತಾನೆಂದು ನಂಬುತ್ತಾರೆ. ಅವರು ನಂಬುತ್ತಾರಾದರೆ ನಾವು ಅದನ್ನು ಯಾಕೆ ಒಪ್ಪಬಾರದು? ಈಗ ಹಾವು ಹೊರಗೆ ಬಂದುದನ್ನು ನೀವು ನೋಡಲಿಲ್ಲವೇ? ನಮಗೆ, ನಮ್ಮ ಸಂಸಾರಕ್ಕೆ ನಾಳೆ ಏನಾದರೂ ಆಗಬಾರದೆಂದಿದೆಯೇ? ಶಾಪ ನಮಗೂ ತಟ್ಟೀತು. ನೆನಪಿಡಿ. ಅಲ್ಲದೆ ಯಾರು ಯಾರೋ ಬಂದು ಕಾಯುತ್ತಿದ್ದಾರೆ. ನಾಳೆ ಜಿಲ್ಲೆ ಉರಿದುಹೋದೀತು. ನಮ್ಮ ಮಕ್ಕಳೂ ಅದರಲ್ಲಿ ಬೆಂದು ಹೋದಾರು. ನಿಮಗೆ ಈ ಕೆಲಸ ಬೇಡ. ನೀವೇನಾದರೂ ನನ್ನ ಮಾತು ಕೇಳಲಿಲ್ಲವೋ, ನಾನು ನೇಣು ಹಾಕಿಕೊಂಡು ಸಾಯುತ್ತೇನೆ. ಹೋಗಬೇಡಿ' ಎಂದವಳು ಮೂಸಬ್ಬನಿಗೆ ಧಮಕಿ ಕೊಡುವ ಸ್ವರದಲ್ಲಿ ಹೇಳಿದಳು. ಮೂಸಬ್ಬ ಮನೆಯಿಂದ ಹೊರಗೆ ಬಂದ. ಮರಕ್ಕೆ ಕೊಡಲಿ ಏಟು ಹಾಕಲು ಒಲ್ಲೆ ಎಂದ.

'ಮರ ಕಡಿಯುವ ಅರ್ಜಿ ಹಾಕಿದ ನಿನಗೇ ಬೇಡ ಅಂತಾದರೆ ಬೇರೆ ಯಾರಿಗೆ ಬೇಕು' ಅಂತ ಪಂಚಾಯತ್ ಅಧ್ಯಕ್ಷರು ಹೊರಟು ಹೋದರು. ಸಂಜೆಯಾಗುತ್ತಾ ಬಂದಿತ್ತು. ಮಳೆಗಾಲದ ಮೊದಲ ಮೋಡ ಪಶ್ಚಿಮ ದಿಕ್ಕಿನಲ್ಲಿ ಏಳುತ್ತಿತ್ತು.

## ಗೋಪಾಲಕೃಷ್ಣ ಪೈ

ಕತೆಗಾರ, ಕಾದಂಬರಿಕಾರ ಹಾಗೂ ಅನುವಾದಕ ಗೋಪಾಲಕೃಷ್ಣ ಪೈ ಕಾಸರಗೋಡಿನ ಪೆರ್ಲದವರು.

ಪೈ ಅವರ ಮೊದಲ ಕಥಾ ಸಂಗ್ರಹ 'ತಿರುವು'. ಬಳಿಕ 'ಈ ಬೆರಳ ಗುರುತು', 'ಹಾರುವ ಹಕ್ಕಿಯ ಗೂಡಿನ ದಾರಿ' ಸಂಕಲನಗಳು ಪ್ರಕಟವಾಗಿವೆ. ಅವರ ಕಾದಂಬರಿ 'ಸ್ವಪ್ನ ಸಾರಸ್ವತ'. 'ಆಧುನಿಕ ಚೀನಿ ಸಣ್ಣಕತೆಗಳು', 'ಚೆಕೋವನ ಕೊನೆಯ ದಿನಗಳು', 'ಮೋಯಾನ್‌ನ ಕಥೆಗಳು', 'ಮಹಾತ್ಮನಿಗಾಗಿ ಕಾಯುತ್ತ' ಅವರ ಅನುವಾದಿತ ಪುಸ್ತಕಗಳು. 'ಕನಸೆಂಬೋ ಕುದುರೆಯನೇರಿ' ಸಿನಿಮಾಕ್ಕೆ ಚಿತ್ರಕತೆ ಬರೆದಿರುವ ಅವರು ಅದರ ಅತ್ಯುತ್ತಮ ಚಿತ್ರಕತೆಗಾಗಿ ಈ ಸಿನಿಮಾದ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರೊಂದಿಗೆ ರಾಷ್ಟ್ರಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.